7 ಶೇ 45ರ ವಾರ್ಷಿಕ ಬೆಳವಣಿಗೆ ಸಾಧಿಸುವುದು

8 ಉತ್ಪಾದನೆ ಆಧಾರಿತ ತಂತ್ರಜ್ಞಾನದಿಂದ ಬೇಡಿಕೆ ಆಧಾರಿತ ತಂತ್ರಜ್ಞಾನದ ಕಡೆಗೆ ಬದಲಾಯಿಸುವುದು

ಆ) ಈ ನೀತಿಯ ಅನುಷ್ಠಾನಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಮಾಡಲಾಗುತ್ತಿದೆ

ಇ) ಹತ್ತು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವ ಈ ನೀತಿಗೆ ಅಗತ್ಯವಿರುವ ಅನುದಾನವನ್ನು ಸಂಬಂಧಪಟ್ಟ ಇಲಾಖೆಯ ವಾರ್ಷಿಕ ಆಯವ್ಯಯದಲ್ಲಿ ಮೀಸಲಿಸಲು ಉದ್ದೇಶಿಸಲಾಗಿದೆ

ಈ) ಕೃಷಿ ನೀತಿಯನ್ನು 2007–08ನೇ ಸಾಲಿನಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವುದರಿಂದ ಈ ಸಾಲಿನಲ್ಲಿ ಇದಕ್ಕಾಗಿ ಯಾವುದೇ ಅನುದಾನವನ್ನು ಮೀಸಲಿಡಲಾಗಿರುವುದಿಲ್ಲ

ಉ) ರಾಜ್ಯದ ಹೊಸ ಕೃಷಿ ನೀತಿಯು ರೈತರ ಅಭಿವೃದ್ಧಿಗೆ ಪೂರಕವಾಗಿರುವುದರಿಂದ ಇದು ರೈತರ ಆತ್ಮಹತ್ಯೆಯನ್ನು ತಡೆಯುವ ಸಾಧನವಾಗಿದೆ ಎಂದು ಭಾವಿಸಲಾಗಿದೆ

ಊ) ರಾಜ್ಯದ ನೂತನ ಕೃಷಿ ನೀತಿಯ ಬೀದರ್ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಭಾಗಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ

123 (251) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ಸಂಖ್ಯೆ ಎಷ್ಟು , ಹಾಗೂ ಇವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತವೆ ,

ಆ) ಈ ಸಂಸ್ಥೆಗಳ ಕಾರ್ಯಚಟುವಟಿಕೆಗಳೇನು ,

ಇ) ಇವುಗಳ ನಿರ್ವಹಣೆಗೆ ಕಳೆದ ಒಂದು ವರ್ಷದಲ್ಲಿ ವೆಚ್ಚ ಮಾಡಿರುವ ಹಣವೆಷ್ಟು,

ಈ) ಸಂಶೋಧನಾ ಕೇಂದ್ರಗಳಿಂದ ಯಾವ ಯಾವ ಹೊಸ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ ,

ಉ) ಈ ಸಂಸ್ಥೆಗಳಿಗೆ ಸೇರಿದ ಜಾಗದ ವಿಸ್ತೀರ್ಣವೆಷ್ಟು ಹಾಗೂ ಈ ಜಾಗದ ಇಂದಿನ ಮಾರುಕಟ್ಟೆ ಮೌಲ್ಯವೆಷ್ಟು ,

ಊ) ಈ ಪೈಕಿ ಎಷ್ಟು ಜಾಗವನ್ನು ಒತ್ತುವರಿ ಮಾಡಲಾಗಿದೆ ಹಾಗೂ ಈ ಒತ್ತುವರಿಯನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿದ್ದು, ಇವು ಬೆಂಗಳೂರು ಮತ್ತು ಧಾರವಾಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಹಾಗೂ 36 ಸಂಶೋಧನಾ ಕೇಂದ್ರಗಳಿದ್ದು, ಅದರ ವಿವರವನ್ನು ಅನುಬಂಧ–ಅ ರಲ್ಲಿ ಲಗತ್ತಿಸಿದೆ

ಆ) ಬೀಜ ತಾಂತ್ರಿಕತೆ, ಬೆಳೆ ಶರೀರ ಕ್ರಿಯಾ ಶಾಸ್ತ್ರ, ಒಣ ಬೇಸಾಯ, ಅನುವಂಶಿಯತೆ, ಬೆಳೆ ಉತ್ಪಾದನೆ, ಬೀಜೋತ್ಪಾದನೆ, ವಿವಿಧ ತಳಿಗಳ ಅಭಿವೃದ್ಧಿ, ಸೀಮರೂಬ, ರೇಷ್ಮೆ, ಅರಣ್ಯಶಾಸ್ತ್ರ, ತೋಟಗಾರಿಕೆ, ಕೃಷಿ ಮಾರುಕಟ್ಟೆ ಹಾಗೂ ಕೃಷಿ ಇಂಜಿನಿಯರಿಂಗ್, ಬೆಳೆ ಸಂಶೋಧನೆ, ಬೆಳೆ ಪದ್ಧತಿ, ಜಲಾನಯನ ಅಭಿವೃದ್ಧಿ ಬಗ್ಗೆ ಸಂಶೋಧನೆ, ವಿಸ್ತರಣೆ, ಮೆಣಸಿನಕಾಯಿ ಸಂಶೋಧನೆ, ಹತ್ತಿ ಸಂಶೋಧನೆ, ಸವಳು / ಕ್ಷಾರ ಭೂಮಿ ನಿರ್ವಹಣೆ, ಬೇಳೆಕಾಳು ಬೆಳೆಗಳ ಸಂಶೋಧನೆ, ಕೂರಿಗೆ ಭತ್ತ ಸಂಶೋಧನೆ, ಬೀಡಿ ತಂಬಾಕು ಸಂಶೋಧನೆ, ಕೃಷಿ ಅರಣ್ಯ ಸಂಶೋಧನೆ, ಕಬ್ಬಿನ ಸಂಶೋಧನೆ, ಮಳೆಯಾಶ್ರಿತ ನಾಟಿ ಭತ್ತ ಸಂಶೋಧನೆ, ಮೆಣಸು ಮತ್ತು ಅಡಿಕೆ ಸಂಶೋಧನೆ ಮುಂತಾದ ವಿಷಯಗಳಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ ಇವುಗಳಿಂದ ದೊರೆತ ಮಾಹಿತಿಯನ್ನು ರಾಜ್ಯದ ರೈತರಿಗೆ ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ನೀಡಲಾಗುತ್ತಿದೆ

ಇ) 2005–06ನೇ ಸಾಲಿನಲ್ಲಿ ಕೃಷಿ ಸಂಶೋಧನಾ ಕೇಂದ್ರಗಳ ನಿರ್ವಹಣೆಗೆ ರೂ 26,66,717 44 ಖರ್ಚು ಮಾಡಲಾಗಿದೆ

ಈ) ಶೇಂಗಾ, ಸೂರ್ಯಕಾಂತಿ, ಜೋಳ ಬೆಳೆಗಳ ಬೀಜೋತ್ಪಾದನೆ, ಕಡೆಲೆ, ಕುಸುಬೆ, ಸಾವಯವ ಕೃಷಿ, ಬರ ನಿರ್ವಹಣೆ, ಹತ್ತಿ, ತೋಟಗಾರಿಕೆ ಬೆಳೆಗಳು ಹಾಗೂ ಪಶು ವಿಜ್ಞಾನ, ಗೋಧಿ, ಸೋಯಾಅವರೆ, ತೊಗರಿ, ನೀರು ನಿರ್ವಹಣೆ, ಕಬ್ಬು, ತರಕಾರಿ ಬೆಳೆಗಳು, ಸುಗರ ಬೀಟ, ಸಜ್ಜೆ, ಕುಸುಬೆ, ಮಣ್ಣು ಮತ್ತು ನೀರು ಸಂಸ್ಕರಣೆ, ಖುಷ್ಕಿ, ಮೆಣಸಿನಕಾಯಿ ಸಂಶೋಧನೆ, ಎಣ್ಣೆಕಾಳು, ಅರಣ್ಯ ಕೃಷಿ, ಗೃಹವಿಜ್ಞಾನ, ಪಶುವಿಜ್ಞಾನ, ಜೈವಿಕ ಇಂಧನ, ಸಂಕರಣ ಹತ್ತಿ, ಉಪ್ಪು ಮತ್ತು ಸವಳು ಭೂಮಿಗಳ ನಿರ್ವಹಣೆ, ತೃಣಧಾನ್ಯಗಳು, ಕೆಂಪು ಮಣ್ಣಿನಲ್ಲಿ ನೀರು ನಿರ್ವಹಣೆ, ಮಳೆಯಾಶ್ರಿತ ಹತ್ತಿ ಮತ್ತು ತೋಟಗಾರಿಕೆ ಬೆಳೆ, ಬೀಡಿ ತಂಬಾಕು, ಔಡಲ, ಎಳ್ಳು, ಗುರೆಳ್ಳು,

ಒಳನಾಡು ಮೀನುಗಾರಿಕೆ, ದ್ರಾಕ್ಷಿ ಬೆಳೆ ಅಭಿವೃದ್ಧಿ, ಸೋಯಾಬಿನ್, ಕಬ್ಬಿನ ಬಿಳಿ ಉಣ್ಣೆ ಹೇನಿನ ಸಮಗ್ರ ನಿರ್ವಹಣೆ, ಕೆಂಪು ಹುಳು ಸಮಗ್ರ ನಿರ್ವಹಣೆ, ತೆಂಗಿನ ಸುಸಿ ಬಾಧೆ ಹಾಗೂ ನಿರ್ವಹಣೆ, ರೈತಾಪಿ ಜನಗಳಿಗೆ ಹೆಚ್ಚಿನ ತರಬೇತಿ, ಬರ ನಿರೋಧಕ ಮತ್ತು ಪೀಡೆ ನಿರೋಧಕ ತಳಿಗಳ ಅಭಿವೃದ್ಧಿ

ಉ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಕೇಂದ್ರಗಳ ಒಟ್ಟು ವಿಸ್ತೀರ್ಣ 5268 19 ಎಕರೆಗಳು ಹಾಗೂ ಇದರ ಈಗಿನ ಮಾರುಕಟ್ಟೆ ಬೆಲೆ ರೂ 1538 34 ಕೋಟಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಕೇಂದ್ರಗಳ ಒಟ್ಟು ವಿಸ್ತೀರ್ಣ 2472 77 ಎಕರೆಗಳು ಹಾಗೂ ಇದರ ಈಗಿನ ಮಾರುಕಟ್ಟೆ ಬೆಲೆ ರೂ 4570 48 ಲಕ್ಷ

ಊ) ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಬೀಜ ಕೇಂದ್ರ ಕಡ್‌ಮಡೇಕಲ್‌ನಲ್ಲಿ ಸೇರಿದ 9 00 ಎಕರೆ ಜಮೀನನ್ನು ಬಾಬುದಾರರು ಒತ್ತುವರಿ ಮಾಡಿಕೊಂಡಿದ್ದು, ಸ್ಥಳೀಯ ಕಂದಾಯ ಅಧಿಕಾರಿಗಳ ಮುಖಾಂತರ ಈ ಜಮೀನನ್ನು ಹಿಂದಕ್ಕೆ ಪಡೆಯಲಾಗಿದೆ ಹಾಗೂ ಧಾರವಾಡಕ್ಕೆ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಶ್ರೀ ಗೌರಿ ಉದಯಕುಮಾರ ದೇಸಾಯಿ, ಸರ್ವೆ ನಂ 92/1 ರ ಮಾಲೀಕರಿದ್ದು, ಇವರು ಕೃಷಿ ವಿಶ್ವವಿದ್ಯಾನಿಲಯದ ಕೆಲಗೇರಿ ಕೆರೆಯ ಸರ್ವೆ ನಂ 90 ರ 12 ಗುಂಟೆ ಜಾಗೆಯನ್ನು ಒತ್ತುವರಿ ಮಾಡಿಕೊಂಡಿದ್ದು, ಜೆ ಡಿ ಎಲ್ ಆರ್, ಬೆಂಗಳೂರು ಇವರು ಕೃಷಿ ವಿಶ್ವವಿದ್ಯಾನಿಲಯ ಧಾರವಾಡದ ಪರವಾಗಿ ತೀರ್ಪು ನೀಡಿದ್ದಾರೆ ಈ ತೀರ್ಪಿನ ವಿರುದ್ಧ ಅರ್ಜಿದಾರರು ಮೇಲ್ಮನವಿ ಪ್ರಾಧಿಕಾರದಲ್ಲಿ ದಾವೆ ಹೂಡಿರುತ್ತಾರೆ

ಅನುಬಂಧ–ಅ

1	ಆಲಮೇಲ	10	ದೇವಿ ಹೊಸೂರ
2	ಅಣ್ಣೆಗೇರಿ	11	ಧಾರವಾಡ (ಮು ಕೇ)
3	ಅರಭಾವಿ	12	ಧಾರವಾಡ ಫಾರ್ಮ
4	ಬಾಗಲಕೋಟೆ	13	ಗದಗ
5	ಬೈಲಹೊಂಗಲ	14	ಗಂಗಾವತಿ
6	ಬೆಳವಟಗಿ	15	ಗುಲ್ಬರ್ಗಾ
7	ಭೀಮರಾಯನಗುಡಿ	16	ಹಗರಿ
8	ಬೀದರ	17	ಅನುಮನಮಟ್ಟಿ
9	ಬಿಜಾಪುರ	18	ಜನವಾಡ

19	ಕಲ್ಲೊಳ್ಳಿ	28	ಸಂಕೇಶ್ವರ
20	ಕಣಬರಗಿ	29	ಶಿಸಿ
21	ಕವಡಿಮಟ್ಟಿ	30	ಶಿಸಿ (ಮೆಣಸು)
22	ಮಾಳನೂರು	31	ಸಿರಗುಪ್ಪ
23	ಮುಗದ	32	ತೊಡಗುಂದಿ
24	ಮಂಡಗೊಡ	33	ರಡ್ಡೇವಾಡಗಿ
25	ನಿಪ್ಪಾಣಿ	34	ಮುಧೋಳ
26	ಪ್ರಭುನಗರ	35	ಸೌಂದಲಗಾ
27	ರಾಯಚೂರು	36	ಮದರಖಂಡಿ

124 (93) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) 2005–06ನೇ ಮತ್ತು 2006–07ನೇ ವರ್ಷದಲ್ಲಿ ಕೈಗೊಂಡ 12ನೇ ಹಣಕಾಸು ಯೋಜನೆಯ ಕುಡಿಯುವ ನೀರಿನ ಟಾಸ್ಕ್‌ಫೋರ್ಸ್‌ನಿಂದ ಪೂರ್ಣಗೊಂಡ ಕಾಮಗಾರಿಗೆ ಹಣ ಬಿಡುಗಡೆಯಾಗಿದೆಯೇ ? ಉಡುಪಿ ತಾಲ್ಲೂಕಿನ ಕ್ಷೇತ್ರವಾರು ವಿವರ ನೀಡುವುದು ,

ಆ) ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 12ನೇ ಹಣಕಾಸು ಆಯೋಗದಡಿ, ಕುಡಿಯುವ ನೀರು ಯೋಜನೆಗಳ ನಿರ್ವಹಣೆ ಮತ್ತು ಅಂತರ್ಜಲ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ವಿನಿಯೋಗಿಸಬಹುದಾಗಿದೆ 2005–06 ಮತ್ತು 2006–07ರ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಕ್ಷೇತ್ರವಾರು ಟಾಸ್ಕ್‌ಫೋರ್ಸ್‌ನಡಿ ಅನುಷ್ಠಾನವಾದ ಕಾಮಗಾರಿಗಳು ಮತ್ತು ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ